**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು**

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ1/ 1901 /2015-16 ದಿನಾಂಕ 11.01.2016

**ಜಾಹೀರಾತು ಸಂಖ್ಯೆ : 4/2016**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಅವಶ್ಯವಿರುವ ಈ ಕೆಳಕಂಡ **"ದರ್ಜೆ-3ರ ಮೇಲ್ವಿಚಾರಕ"** ಹುದ್ದೆಗಳನ್ನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವೃಂದ ಮತ್ತು ನೇಮಕ) ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿಗಳ ಅನುಸಾರ **ನೇರ ನೇಮಕಾತಿ** ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ (ON LINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು ನೇಮಕಾತಿ ಸಮಯದಲ್ಲಿ ಸಂಸ್ಥೆಯು ಅವಶ್ಯಕತೆಗೆ ಅನುಗುಣವಾಗಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚು/ಕಡಿಮೆ ಮಾಡಿ ಮಾರ್ಪಡಿಸಬಹುದಾಗಿರುತ್ತದೆ. ಹುದ್ದೆಗಳು ಮತ್ತು ಅವುಗಳ ಮೀಸಲಾತಿ ವಿವರ ಈ ಕೆಳಕಾಣಿಸಿದಂತಿರುತ್ತದೆ.

**ಸಿಬ್ಬಂದಿ ಮೇಲ್ವಿಚಾರಕ (ಹಿಂಬಾಕಿ)**

| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | | | 1 | | | | | | 1 |
| ಮಹಿಳೆ | | | | 3 | | | | | 3 |
| ಮಾ.ಸೈನಿಕ | | | 1 | 1 | | | | | 2 |
| ಯೋ.ನಿರಾಶ್ರಿತ | | | | 1 | | | | | 1 |
| ವಿಕಲಚೇತನ | | | | | | | | 1 | 1 |
| GMPH- Low vision | | | | | | | | | |
| ಒಟ್ಟು | 0 | 0 | 2 | 5 | 0 | 0 | 0 | 1 | 8 |

**ಲೆಕ್ಕಪತ್ರ ಮೇಲ್ವಿಚಾರಕ (3 ವಿಕಲಚೇತನ ಹುದ್ದೆಗಳ ಹಿಂಬಾಕಿ)**

| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
|---|---|---|---|---|---|---|---|---|---|
| ಮಹಿಳೆ | 1 | | | | | | | | 1 |
| ವಿಕಲಚೇತನ | 1 | | | 1 | | | | 2 | 4 |
| GMPH, SCPH, 2APH- Low vision, GMPH-Leprosy cured | | | | | | | | | |
| ಒಟ್ಟು | 2 | 0 | 0 | 1 | 0 | 0 | 0 | 2 | 5 |

**ಉಗ್ರಾಣ ರಕ್ಷಕ**

| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | | | | 1 | | | | | 1 |
| ಮಹಿಳೆ | | | | | | | | 1 | 1 |
| ಒಟ್ಟು | 0 | 0 | 0 | 1 | 0 | 0 | 0 | 1 | 2 |

| ಸಂಚಾರ ನಿರೀಕ್ಷಕ | | | | | | | | | |
|---|---|---|---|---|---|---|---|---|---|
| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
| ಸಾಮಾನ್ಯ | 1 | | 1 | 1 | 1 | | | 5 | 9 |
| ಮಹಿಳೆ | 1 | | 1 | 1 | 1 | 1 | 1 | 6 | 12 |
| ಗ್ರಾಮೀಣ | 2 | | | 2 | | | 1 | 4 | 9 |
| ಮೂ.ಸೈನಿಕ | 1 | | | 1 | | | | 2 | 4 |
| ಕ.ಮಾಧ್ಯಮ | | 1 | | | | | | | 1 |
| ಯೋ.ನಿರಾಶ್ರಿತ | | | | | | | | 1 | 1 |
| ಒಟ್ಟು | 5 | 1 | 2 | 5 | 2 | 1 | 2 | 18 | 36 |
| ಪಾರುಪತ್ತೆಗಾರ | | | | | | | | | |
| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
| ಸಾಮಾನ್ಯ | 1 | 1 | | 1 | | | | 3 | 6 |
| ಮಹಿಳೆ | | | | 1 | | | | 3 | 4 |
| ಗ್ರಾಮೀಣ | 1 | | | 1 | | | 1 | 3 | 6 |
| ಮೂ.ಸೈನಿಕ | 1 | | | 1 | | | | 1 | 3 |
| ಕ.ಮಾಧ್ಯಮ | | | 1 | | 1 | | | | 2 |
| ಒಟ್ಟು | 3 | 1 | 1 | 4 | 1 | 0 | 1 | 10 | 21 |
| ವಿಭಾಗೀಯ ಭದ್ರತಾ ನಿರೀಕ್ಷಕ (ಹಿಂಬಾಕಿ) | | | | | | | | | |
| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
| ಮಹಿಳೆ | 1 | | | 1 | | | | | 2 |
| ಅಂಕಿಅಂಶ ಮೇಲ್ವಿಚಾರಕ | | | | | | | | | |
| ಮೀಸಲಾತಿ | ಪ.ಜಾ | ಪ.ಪಂ | ವರ್ಗ-1 | 2ಎ | 2ಬಿ | 3ಎ | 3ಬಿ | ಸಾ ಅ | ಒಟ್ಟು |
| ಸಾಮಾನ್ಯ | | | | | | | | 1 | 1 |
| ಮಹಿಳೆ | | | | 1 | | | | | 1 |
| ಒಟ್ಟು | 0 | 0 | 0 | 1 | 0 | 0 | 0 | 1 | 2 |

(ಮೇಲ್ಕಂಡ ಹುದ್ದೆಗಳ ವರ್ಗೀಕರಣವು ತಾತ್ಕಾಲಿಕವಾಗಿದ್ದು, ಅವಶ್ಯಕತೆ ಅನುಗುಣವಾಗಿ ಮಾರ್ಪಡಿಸಬಹುದಾಗಿದೆ)

**ಟಿಪ್ಪಣಿ**: ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

## I ಅರ್ಹತೆಗಳು (ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ 25.02.2016 ರಂದಿಗೆ)

1. **ಶೈಕ್ಷಣಿಕ ವಿದ್ಯಾರ್ಹತೆ** :

| ಕ್ರ.ಸಂ | ಹುದ್ದೆ | ವಿದ್ಯಾರ್ಹತೆ |
|---|---|---|
| 1 | ಸಿಬ್ಬಂದಿ ಮೇಲ್ವಿಚಾರಕ<br>Establishment Supervisor | ಅ)ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ಕಲಾ/ವಿಜ್ಞಾನ/ವಾಣಿಜ್ಯ/ಬಿಸಿಎ ನಲ್ಲಿ ಬ್ಯಾಚುಲರ್ ಪದವಿ ಜೊತೆಗೆ ಪರ್ಸನಲ್ ಮ್ಯಾನೇಜ್‌ಮೆಂಟ್ ಮತ್ತು ಇಂಡಸ್ಟ್ರಿಯಲ್ ರಿಲೇಷನ್ಸ್ ವಿಷಯದಲ್ಲಿ ಡಿಪ್ಲಮೊ ಹೊಂದಿರಬೇಕು.<br>ಆ)ಕಂಪ್ಯೂಟರ್ ಜ್ಞಾನವು ಅವಶ್ಯಕವಾಗಿರುತ್ತದೆ.<br>a) Must posses a second class Bachelor Degree in Arts/ Science/ Commerce/ BCA three years course, with Diploma in Personnel Management and Industrial Relations from a University established by Law.<br>b) Computer Knowledge is essential. |

| | | |
|---|---|---|
| 2 | ಲೆಕ್ಕಪತ್ರ ಮೇಲ್ವಿಚಾರಕ<br>Accounts Supervisor | ಅ)ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ವಾಣಿಜ್ಯ ವಿಷಯದಲ್ಲಿ ಬ್ಯಾಚುಲರ್ ಪದವಿ ಹೊಂದಿರಬೇಕು.<br>ಆ) ಕಂಪ್ಯೂಟರ್ ಜ್ಞಾನವು ಅವಶ್ಯಕವಾಗಿರುತ್ತದೆ.<br>a) A second class Bachelor Degree in Commerce three years course from a University established by Law.<br>b) Computer Knowledge is essential. |
| 3 | ಉಗ್ರಾಣ ರಕ್ಷಕ<br>Store Keeper | ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ಕಲಾ/ ವಿಜ್ಞಾನ/ ವಾಣಿಜ್ಯ / ಬಿಸಿಎ ನಲ್ಲಿ ಬ್ಯಾಚುಲರ್ ಪದವಿ ಹೊಂದಿರಬೇಕು.<br>ಆ) ಕಂಪ್ಯೂಟರ್ ಜ್ಞಾನವು ಅವಶ್ಯಕವಾಗಿರುತ್ತದೆ.<br>a) Must posses a second class Bachelor Degree in Arts/Science/Commerce/BCA three years course from a University established by Law.<br>b) Computer Knowledge is essential. |
| 4 | ಸಂಚಾರ ನಿರೀಕ್ಷಕ<br>Traffic Inspector | ಅ) ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ಕಲಾ/ ವಿಜ್ಞಾನ/ ವಾಣಿಜ್ಯ/ ಬಿಸಿಎ/ ಬಿಬಿಎಂ ನಲ್ಲಿ ಬ್ಯಾಚುಲರ್ ಪದವಿ ಹೊಂದಿರಬೇಕು.<br>ಆ) ಕಂಪ್ಯೂಟರ್ ಜ್ಞಾನವು ಅವಶ್ಯಕವಾಗಿರುತ್ತದೆ.<br>a) Must posses a second class Bachelor Degree in Arts/ Science / Commerce/ BCA/ BBM three years course from a University established by Law.<br>b) Computer Knowledge is essential. |
| 5 | ಪಾರುಪತ್ತೆಗಾರ<br>Chargeman | ಅ) ಅಂಗೀಕೃತ ಸಂಸ್ಥೆಯೊಂದರಿಂದ ಆಟೋಮೊಬೈಲ್/ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲಮೋ ಹೊಂದಿರಬೇಕು.<br>ಆ) ಚಾಲ್ತಿಯಲ್ಲಿರುವ ಭಾರೀ ವಾಹನ ಚಾಲನಾ ಪರವಾನಗಿ ಹೊಂದಿರಬೇಕು.<br>a) A Diploma in Mechanical/Automobile engineering from a recognized Institution.<br>b) Must posses a valid current HTV license. |
| 6 | ವಿಭಾಗೀಯ ಭದ್ರತಾ ನಿರೀಕ್ಷಕ<br>Divisional Security Inspector | ಕಾನೂನು ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವೊಂದರಿಂದ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ಕಲಾ/ವಿಜ್ಞಾನ/ವಾಣಿಜ್ಯದಲ್ಲಿ ಬ್ಯಾಚುಲರ್ ಪದವಿ ಹೊಂದಿರಬೇಕು ಅಥವಾ ಪ್ರಥಮ ದರ್ಜೆಯ ಸೇನಾ ಪ್ರಮಾಣಪತ್ರವನ್ನು ಹೊಂದಿ, ಎರಡು ವರ್ಷ ಸೇವೆ ಸಲ್ಲಿಸಿರುವ ಜೂನಿಯರ್ ಕಮೀಷನ್ಡ್ ಅಧಿಕಾರಿ & ನೌಕೆ/ವಾಯು ಪಡೆಯಲ್ಲಿ ತತ್ಸಮಾನ ದರ್ಜೆ.<br>Must posses a second class Bachelor Degree in Arts /Science /Commerce, three years course, from a University established by Law or Junior Commissioned Officer who has passed the Army first class certificate with a service of two years and equivalent rank in Navy/Airforce. |
| 7 | ಅಂಕಿಅಂಶ ಮೇಲ್ವಿಚಾರಕ<br>Statistical Supervisor | ಅ) ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣ ಹೊಂದಿರುವ ಮೂರು ವರ್ಷ ಅವಧಿಯ ಕಂಪ್ಯೂಟರ್ ಸೈನ್ಸ್/ಬಿಸಿಎ/ಸ್ಟ್ಯಾಟಿಸ್ಟಿಕ್ಸ್ ನಲ್ಲಿ ಬ್ಯಾಚುಲರ್ ಪದವಿ ಹೊಂದಿರಬೇಕು.<br>ಆ) ಕಂಪ್ಯೂಟರ್ ಜ್ಞಾನವು ಅವಶ್ಯಕವಾಗಿರುತ್ತದೆ.<br>a) A second class Bachelor Degree in Statistics or BCA or BSc Computer Science three years course.<br>b) Knowledge in Computer Application is essential. |

2. **ವಯೋಮಿತಿ :**

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ 25.02.2016 ರಂದಿಗೆ,

ಅ. ಕನಿಷ್ಠ 18 ವರ್ಷಗಳು ಪೂರ್ಣಗೊಂಡಿರಬೇಕು.

ಆ. ಗರಿಷ್ಠ ಈ ಕೆಳಕಾಣಿಸಿದ ವಯಸ್ಸು ಮೀರಿರಬಾರದು.

| ವರ್ಗ | ವಯಸ್ಸು |
|---|---|
| ಸಾಮಾನ್ಯ ವರ್ಗ | 35 ವರ್ಷಗಳು |
| 2ಎ/2ಬಿ/3ಎ/3ಬಿ | 38 ವರ್ಷಗಳು |
| ಪ.ಜಾತಿ/ಪ.ಪಂ/ ವರ್ಗ-1 | 40 ವರ್ಷಗಳು |

ಇ. ಇಲಾಖಾ ಅಭ್ಯರ್ಥಿಗಳು ಅವರು ಸಲ್ಲಿಸಿರುವ ಸೇವಾವಧಿಯ ಗರಿಷ್ಠ 10 ವರ್ಷಗಳಿಗೆ ಮೀರದಂತೆ ವಯೋಮಿತಿ ರಿಯಾಯಿತಿಗೆ ಅರ್ಹರು ಮತ್ತು ರಿಯಾಯಿತಿ ನಂತರ ಅವರ ವಯಸ್ಸು 45 ವರ್ಷ ಮೀರಿರಬಾರದು.

ಈ. ಮಾಜಿ ಸೈನಿಕ ಅಭ್ಯರ್ಥಿಯು ಭಾರತದ ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿ, ಮಾಜಿ ಸೈನಿಕ ಎಂಬುದಕ್ಕೆ ಅರ್ಹ ಪ್ರಮಾಣಪತ್ರವನ್ನು ಹೊಂದಿದ್ದರೆ, ಅವರು ಸಲ್ಲಿಸಿದ ಸೇವಾವಧಿಯ ಜೊತೆಗೆ ಮೂರು ವರ್ಷಗಳ ವಯೋಮಿತಿಯ ರಿಯಾಯಿತಿಗೆ ಅರ್ಹರಿರುತ್ತಾರೆ. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.

3. **ದೇಹದಾರ್ಢ್ಯತೆ :**

ಸಂಚಾರ ನಿರೀಕ್ಷಕ ಹಾಗೂ ವಿಭಾಗೀಯ ಭದ್ರತಾ ನಿರೀಕ್ಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆಯನ್ನು ಕಡ್ಡಾಯವಾಗಿ ಹೊಂದಿರಬೇಕು.

| | ಪುರುಷರು | ಮಹಿಳೆಯರು |
|---|---|---|
| ಎತ್ತರ | 163 ಸೆಂ.ಮೀ | 153 ಸೆ.ಮೀ |
| ತೂಕ | 55 ಕೆ.ಜಿ | 50 ಕೆ.ಜಿ |

## II <u>ಮೀಸಲಾತಿಗಳು</u>

i. **ಜಾತಿ/ವರ್ಗ ಮೀಸಲಾತಿ :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ಮೀಸಲಾತಿಗಳಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರದ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿತ ಕೊನೆಯ ದಿನಾಂಕ 25.02.2016 ರ ಒಳಗೆ ಪಡೆದು, ಚಾಲ್ತಿಯಲ್ಲಿರುವ ಜಾತಿ/ಆದಾಯದ ಪ್ರಮಾಣ ಪತ್ರವನ್ನು ಹೊಂದಿರಬೇಕು. ಕೊನೆಯ ದಿನಾಂಕದ ನಂತರ ಪಡೆದ ಜಾತಿ/ವರ್ಗ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

**(ವಿದ್ಯಾಭ್ಯಾಸ/ಶಿಕ್ಷಣಕ್ಕಾಗಿ/ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಅಥವ ಸಾಲಕ್ಕಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ).**

ii. ಗ್ರಾಮೀಣ ಮೀಸಲಾತಿ

ಸರ್ಕಾರದ ಪ್ರಚಲಿತ ಆದೇಶಗಳಂತೆ 1ನೇ ತರಗತಿಯಿಂದ 10ನೇ ತರಗತಿಯವರಗೆ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

ಅ. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ ಹಾಗೂ 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಗ್ರಾಮೀಣ ಪ್ರಮಾಣ ಪತ್ರವನ್ನು ಸರ್ಕಾರದ ನಿಗದಿತ ನಮೂನೆಯಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರದ ಮೇಲೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಮಾಡಿಸಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

ಆ. ಗ್ರಾಮೀಣ ಮೀಸಲಾತಿ ಕೋರ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೇಲಿನಂತೆ ಪಡೆದ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರದೊಂದಿಗೆ ಮೇಲುಸ್ತರಕ್ಕೆ ಸೇರಿಲ್ಲ ಎಂಬ ಬಗ್ಗೆ ಸಂಬಂದಪಟ್ಟ ತಹಸೀಲ್ದಾರರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.

iii. **ಕನ್ನಡ ಮಾಧ್ಯಮ :**
ಸರ್ಕಾರದ ಆದೇಶದಂತೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಎಲ್ಲಾ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಾಗಿ, ನಿಗಧಿತ ನಮೂನೆಯಲ್ಲಿ ಸಂಬಂದಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗು ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರ ಹೊಂದಿರಬೇಕು.

iv. **ಯೋಜನಾ ನಿರಾಶ್ರಿತರು :**
ಸರ್ಕಾರದ ಆದೇಶಗಳಂತೆ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಸಮರ್ಪಕ ಪ್ರಮಾಣ ಪತ್ರ ಹೊಂದಿರಬೇಕು. ಈ ಪ್ರಮಾಣಪತ್ರದಲ್ಲಿ ಸಂಬಂದಪಟ್ಟ ಎಲ್ಲಾ ಐಟಂ/ಕಲಂಗಳನ್ನು ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಿರುತ್ತಾರೆ.

v. **ಮಾಜಿ ಸೈನಿಕರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪರಿಭಾಷೆಯನ್ನು ಹೊಂದಿರತಕ್ಕದ್ದು:**

"EX-SERVICEMEN" means a person, who has served in any rank (whether as a combatant or as a non-combatant) in the regular Army, Navy and Air Forces of the Union but does not include a person who has served in the Defence Security Corps, the General Reserve Engineering Force, the Lok Sahayak Sene and Para Military Forces and

a) Who has retired from such services earning his pension, or
b) Who has been released from such service on Medical Grounds attributable to military service or circumstances beyond his control and awarded medical or other disability pensions, or
c) Who has been released otherwise than on his own request from such service as a result of reduction in Establishment, or
d) Who has been released from such service after completing the specific period of engagement otherwise than at his own request or by way of dismissal or discharge on account of mis-conduct or in-efficiency and has been given a gratuity and includes personnel of the Territorial Army of the following categories, namely:

(i) Pension holders for continuous embodied service
(ii) Pension with disability attributable to military service; and
(iii) Gallantry award winners

In respect of Ex-Servicemen, by three years plus by the number of years of service rendered by him in Armed Forces of the Union subject to the condition the Ex-servicemen shall not have completed 45 years of age.

vii. **ವಿಕಲಚೇತನ ಮೀಸಲಾತಿ :**
ಸರ್ಕಾರದ ಆದೇಶ ಸಂಖ್ಯೆ :ಸಿಆಸುಇ/115/ಸೆನೆನಿ/2005, ದಿನಾಂಕ 19/11/2005 ರಲ್ಲಿ ಸೂಚಿಸಿರುವಂತೆ ಅಂಗವಿಕಲತೆಯ ಮೀಸಲಾತಿಗೆ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಿಗಳಿಂದ ಪಡೆದ ಸಮರ್ಪಕ ಪ್ರಮಾಣ ಪತ್ರ ಹೊಂದಿರಬೇಕು.

## III ನಿಗಧಿತ ಶುಲ್ಕ

1. ಶುಲ್ಕದ ವಿವರ :

| ವರ್ಗ | ಶುಲ್ಕ(ಪ್ರತಿ ಹುದ್ದೆಗೆ) |
|---|---|
| ಸಾಮಾನ್ಯ, 2ಎ, 2ಬಿ, 3ಎ ಮತ್ತು 3ಬಿ ವರ್ಗ | ರೂ.500/- |
| ಪ.ಜಾತಿ, ಪ.ಪಂಗಡ, ವರ್ಗ-1, ಮಾಜಿ ಸೈನಿಕ ಮತ್ತು ಅಶಕ್ತ ಮಾಜಿ ಸೈನಿಕರ ಅವಲಂಬಿತರಿಗೆ | ರೂ.250/- |

**ವಿಶೇಷ ಸೂಚನೆ** : ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಮೇಲ್ಕಾಣಿಸಿದಂತೆ ನಿಗದಿಪಡಿಸಿರುವ ಮೊತ್ತವನ್ನು ಒಗ್ಗೂಡಿಸಿ ಎಲ್ಲಾ ಹುದ್ದೆಗಳಿಗೂ ಸೇರಿದಂತೆ ಒಟ್ಟು ಹಣದ ಮೊತ್ತವನ್ನು ಒಂದೇ ಚಲನ್‌ನಲ್ಲಿ ಪಾವತಿ ಮಾಡಬೇಕು(ಉದಾಹರಣೆಗೆ : ಒಬ್ಬ ಸಾಮಾನ್ಯ ವರ್ಗದ ಅಭ್ಯರ್ಥಿ ಒಂದೇ ಅರ್ಜಿಯಲ್ಲಿ ಮೂರು ಹುದ್ದೆಗಳನ್ನು ಆಯ್ಕೆ ಮಾಡಿದಲ್ಲಿ ರೂ.1500/- ಗಳ ಮೊತ್ತವನ್ನು ಚೆಲನ್ನ್‌ನಲ್ಲಿ ನಮೂದಿಸತಕ್ಕದ್ದು). ಒಮ್ಮೆ ಅರ್ಜಿಯಲ್ಲಿ ನಮೂದಿಸಿದ ಹುದ್ದೆ ಅಂತಿಮವಾಗಿದ್ದು ಬದಲಾವಣೆಗೆ ಅವಕಾಶವಿರುವುದಿಲ್ಲ.

2. **ಶುಲ್ಕ ಪಾವತಿ ಮಾಡುವ ವಿಧಾನ್** :

www.ksrtcjobs.com ನಲ್ಲಿ ON LINE ಮೂಲಕ ಅರ್ಜಿ ಸಲ್ಲಿಸಿದ ಕೂಡಲೇ ಅಭ್ಯರ್ಥಿಯು ಚಲನ್ ಪ್ರತಿಯನ್ನು ಡೌನ್-ಲೋಡ್ ಮಾಡಿಕೊಂಡು ಅರ್ಜಿ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (Computerised Post Offices Only) ಮಾತ್ರ e-payment ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂಚೆ ಕಚೇರಿಯಲ್ಲಿ ಪಾವತಿಸಿದ ಮೂಲ ಚಲನ್ ಪ್ರತಿಯನ್ನು ದಾಖಲಾತಿ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ಬೇರೆ ಯಾವುದೇ ರೀತಿ ಶುಲ್ಕ ಪಾವತಿಸಿದ್ದಲ್ಲಿ ಸದರಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

3. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವ ಅದನ್ನು ಸಂಸ್ಥೆಯು ನಡೆಸುವ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ ; ಅರ್ಜಿ ಶುಲ್ಕವನ್ನು ಸಂದಾಯ ಮಾಡದಿರುವುದು ಅಥವ ಕಡಿಮೆ ಮೊತ್ತದ ಅರ್ಜಿ ಶುಲ್ಕವನ್ನು ಪಾವತಿಸಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದರೂ ಸಹ ಅಂತಹ ಅಭ್ಯರ್ಥಿಗಳ ಅಭ್ಯರ್ಥತನವನ್ನು ತಿರಸ್ಕರಿಸಲಾಗುವುದು**

## IV ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ಕೊನೆಯ ದಿನಾಂಕ

ಅ. ಅರ್ಜಿಯನ್ನು ಕಡ್ಡಾಯವಾಗಿ ಆನ್ ಲೈನ್ ಮುಖಾಂತರವೇ ಕ ರಾ ರ ಸಾ ನಿಗಮದ ವೆಬ್ ಸೈಟ್ www.ksrtcjobs.com ಮೂಲಕ ಸಲ್ಲಿಸಬೇಕು.

ಆ. ದಿನಾಂಕ 30.01.2016 ರಿಂದ 25.02.2016 ರವರಗೆ ವೆಬ್ ಸೈಟ್ ತೆರೆದಿರುತ್ತದೆ. ಅರ್ಜಿಗಳನ್ನು ಕೊನೆಯ ದಿನಾಂಕವಾದ 25.02.2016 ರ ಸಂಜೆ 17:30 ಗಂಟೆಯೊಳಗೆ ಆನ್ ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.

ಇ. ಅಂಚೆ ಕಚೇರಿಯ ವೇಳೆಯೊಳಗೆ ಅಂಚೆ ಕಚೇರಿಯಲ್ಲಿ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 27.02.2016.

ಈ. ಮೇಲ್ಕಂಡ ನಿಗದಿತ / ಕೊನೆಯ ದಿನಾಂಕ ಮತ್ತು ಸಮಯದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಉ ಅಭ್ಯರ್ಥಿಗಳು ಕೇವಲ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಬಹುದಾಗಿದ್ದು ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ತುಂಬಿ ಸಲ್ಲಿಸತಕ್ಕದ್ದು.

ಊ. ಅಭ್ಯರ್ಥಿಗಳು ಸೂಚನೆಗಳನ್ನು ಓದಿ, ಅರ್ಥ ಮಾಡಿಕೊಂಡ ನಂತರ ಅರ್ಜಿಯನ್ನು ಆನ್-ಲೈನ್‌ನಲ್ಲಿ ಭರ್ತಿ ಮಾಡಿ, ಭಾವಚಿತ್ರ ಹಾಗೂ ಸಹಿಯನ್ನು ಅರ್ಜಿಯೊಂದಿಗೆ ಅಪ್-ಲೋಡ್ ಮಾಡಿ ಸಲ್ಲಿಸತಕ್ಕದ್ದು. ಅಪ್-ಲೋಡ್ ಮಾಡಿ ಸಲ್ಲಿಸಿದ ಮುದ್ರಿತ ಅರ್ಜಿ ಹಾಗೂ ಅರ್ಜಿ ಶುಲ್ಕ ಪಾವತಿಯ ಅಂಚೆ ಕಚೇರಿ ಚಲನ್ ಪ್ರತಿಗಳನ್ನು ಅಭ್ಯರ್ಥಿಗಳು ತಮ್ಮ ಬಳಿ ಇಟ್ಟುಕೊಂಡು CAT ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.

## V ಆಯ್ಕೆ ವಿಧಾನ

- ಈ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ.
- ಸದರಿ ಪರೀಕ್ಷೆಯನ್ನು ಬೆಂಗಳೂರು/ ಮೈಸೂರು/ ಮಂಗಳೂರು/ ದಾವಣಗೆರೆ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು.(ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಆಯ್ಕೆ ಮಾಡಿಕೊಳ್ಳುವ ಕೇಂದ್ರವನ್ನು & ಪರೀಕ್ಷೆಯ ಮಾಧ್ಯಮವನ್ನು ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಂನಲ್ಲಿ ಸ್ಪಷ್ಟವಾಗಿ ನಮೂದಿಸಬೇಕು). ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಾಗ್ಯೂ ಒಂದೇ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುವುದು. ಅಭ್ಯರ್ಥಿಗಳ ಲಭ್ಯತೆಯ ಆಧಾರದ ಮೇಲೆ ಅವಶ್ಯಕತೆಗನುಗುಣವಾಗಿ ಪರೀಕ್ಷಾ ಕೇಂದ್ರಗಳನ್ನು ಬದಲಾವಣೆ ಮಾಡಬಹುದಾಗಿರುತ್ತದೆ.
- ಮೇಲ್ಕಂಡಂತೆ ಅರ್ಹತೆ ಹಾಗೂ ನೀತಿಯನುಸಾರ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲಾತಿಗಳು / ದೈಹಿಕ ದಾರ್ಢ್ಯತೆ ಪರಿಶೀಲನೆಗಾಗಿ ಆಹ್ವಾನಿಸಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ತಮ್ಮ ಹುದ್ದೆಯ ಆದ್ಯತೆಯನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ನಮೂದಿಸಿರತಕ್ಕದ್ದು. ಆಯ್ಕೆಯ ಸಂದರ್ಭದಲ್ಲಿ ಅವರು ಹುದ್ದೆಗೆ ಅರ್ಜಿಯಲ್ಲಿ ಹುದ್ದೆವಾರು ನೀಡಿರುವ ಆದ್ಯತೆ, ಅರ್ಹತೆ ಮತ್ತು ಮೀಸಲಾತಿಯ ಅನುಸಾರ ಆಯ್ಕೆಗೆ ಪರಿಗಣಿಸಲಾಗುವುದು.
- ವಿವಿದ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವ ಅಂತಿಮ ಮೆರಿಟ್ ಲೆಕ್ಕಾಚಾರದ ವಿವರಗಳು ಈ ಕೆಳಕಾಣಿಸಿದಂತಿರುತ್ತದೆ.

| ಕ್ರ.ಸಂ | ಹುದ್ದೆ | ಅಂತಿಮ ಮೆರಿಟ್ ಲೆಕ್ಕಾಚಾರದ ವಿಧಾನ |
|---|---|---|
| 1 | ಸಿಬ್ಬಂದಿ ಮೇಲ್ವಿಚಾರಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ.75ರಷ್ಟು ಅಂಕಗಳು + ನಿಗಧಿತ ವಿದ್ಯಾರ್ಹತೆಯಲ್ಲಿ (ಪದವಿ+ಡಿಪ್ಲೊಮ) ಪಡೆದಿರುವ ಅಂಕಗಳ ಶೇ.25 ಅಂಕಗಳು. |
| 2 | ಲೆಕ್ಕಪತ್ರ ಮೇಲ್ವಿಚಾರಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 50 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.50 ಅಂಕಗಳು. |
| 3 | ಉಗ್ರಾಣ ರಕ್ಷಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 75 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.25 ಅಂಕಗಳು. |
| 4 | ಸಂಚಾರ ನಿರೀಕ್ಷಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 75 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.25 ಅಂಕಗಳು. |
| 5 | ಪಾರುಪತ್ತೆಗಾರ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 50 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.50 ಅಂಕಗಳು. |
| 6 | ವಿಭಾಗೀಯ ಭದ್ರತಾ ನಿರೀಕ್ಷಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 75 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.25 ಅಂಕಗಳು. |
| 7 | ಅಂಕಿಅಂಶ ಮೇಲ್ವಿಚಾರಕ | ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಶೇ. 50 ರಷ್ಟು ಅಂಕಗಳು+ನಿಗಧಿತ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇ.50 ಅಂಕಗಳು. |

## VI ತರಬೇತಿ ಅವದಿ, ಭತ್ಯೆ ಹಾಗೂ ವೇತನ ಶ್ರೇಣಿ

ಅ. ಅರ್ಹ ಅಭ್ಯರ್ಥಿಗಳು ಮೇಲ್ಕಾಣಿಸಿದ ಹುದ್ದೆಗೆ ಆಯ್ಕೆಗೊಂಡಲ್ಲಿ, ಒಂದು ವರ್ಷದ ಕಾಲ ಪತ್ಯ/ವೃತ್ತಿ ತರಬೇತಿಗೆ ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ, ಮಾಸಿಕ ರೂ.10,150/- ದರದ ತರಬೇತಿ ಭತ್ಯೆಗೆ ಅರ್ಹರಿರುತ್ತಾರೆ.

ಆ. ಹುದ್ದೆಗೆ ನಿಗದಿಪಡಿಸಿರುವ ಇತರೆ ಭತ್ಯೆಗಳು.

ಇ. ಆಯ್ಕೆಗೊಂಡ ಅಭ್ಯರ್ಥಿಗಳು ಒಂದು ವರ್ಷ ಕರ್ತವ್ಯದ ಮೇಲೆ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ, ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯಲ್ಲಿ ನೇಮಕಗೊಳಿಸಿ ರೂ.14870-420-15710-530-17300-640-20500-730-24150-830-26640 (18 ವರ್ಷ) ರಂತೆ ಅಥವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿಪಡಿಸಲಾಗುವುದು.

## VII ದಾಖಲಾತಿಗಳ ವಿವರ

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಅರ್ಹತೆ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಈ ಕೆಳಕಂಡ ಮೂಲ ದಾಖಲಾತಿಗಳ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕವಾದ 25.02.2016 ರಂದಿಗೆ ಹೊಂದಿರಬೇಕು ಹಾಗೂ ಸಂಸ್ಥೆಯು ಅವುಗಳನ್ನು ಹಾಜರುಪಡಿಸಲು ಸೂಚಿಸಿದಾಗ ತಪ್ಪದೆ ಹಾಜರು ಪಡಿಸತಕ್ಕದ್ದು.

1. ಅರ್ಜಿ ಶುಲ್ಕ ಪಾವತಿ ಮಾಡಿರುವ ಬಗ್ಗೆ ಅಂಚೆ ಕಚೇರಿಯಲ್ಲಿ ನೀಡುವ ಚಲನ್‌ನ ಮೂಲ ಪ್ರತಿ.
2. ಆಯಾ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರಗಳು.
3. ಜನ್ಮ ದಿನಾಂಕದ ದಾಖಲೆಗಾಗಿ ಜನ್ಮ ದಿನಾಂಕವುಳ್ಳ ಎಸ್ ಎಸ್ ಎಲ್ ಸಿ ಅಂಕಪಟ್ಟಿ /ಶಾಲಾ ವರ್ಗಾವಣಾ ಪತ್ರ/ಕ್ಯುಮಿಲೇಟೀವ್ ರೆಕಾರ್ಡ್.
4. ಸೈನಿಕ ಸೇವೆಯಿಂದ ಬಿಡುಗಡೆಯಾಗಿ / ಮುಕ್ತಿ ಹೊಂದಿ ಮಾಜಿ ಸೈನಿಕ ಎಂಬುದಾಗಿ ನಿರ್ಧರಿಸಿರುವ ಬಗ್ಗೆ ಪ್ರಮಾಣಪತ್ರ.(ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
5. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, ಹಾಗೂ 3ಬಿ ವರ್ಗಗಳ ಮೀಸಲಾತಿಯ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳು. (ಜಾತಿ/ವರ್ಗಗಳ ಮೀಸಲಾತಿ ಕೋರಿದ್ದಲ್ಲಿ).
6. ನಮೂನೆ-1 ಮತ್ತು ನಮೂನೆ-2 ರಲ್ಲಿ ಪಡೆದ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರ ಪ್ರತಿಗಳು(ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ).
7. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ. (ಕನ್ನಡ ಮಾಧ್ಯಮ ಮೀಸಲಾತಿ ಕೋರಿದ್ದಲ್ಲಿ).
8. ಯೋಜನಾ ನಿರಾಶ್ರಿತ ಮೀಸಲಾತಿಗಾಗಿ ಅಧಿಕೃತ ಪ್ರಾಧಿಕಾರಸ್ಥರಿಂದ ಪಡೆದ ಸಮರ್ಪಕವಾದ ಪ್ರಮಾಣ ಪತ್ರ ಹೊಂದಿರಬೇಕು.
9. ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅಧಿಕೃತ ಪ್ರಾಧಿಕಾರಸ್ಥರಿಂದ ಪಡೆದ ಸಮರ್ಪಕ ಪ್ರಮಾಣ ಪತ್ರ ಹೊಂದಿರಬೇಕು.
10. ಇಲಾಖಾ ಅಭ್ಯರ್ಥಿಗಳು ಸಂಬಂದಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಪಡೆದ ಸೇವಾ ಪ್ರಮಾಣ ಪತ್ರ. (ಇಲಾಖಾ ಅಭ್ಯರ್ಥಿಯಾಗಿದ್ದಲ್ಲಿ).

## VIII ಸೂಚನೆಗಳು

- ಒಬ್ಬ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
- ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಎಲ್ಲಾ ಹುದ್ದೆಗಳನ್ನು ನಮೂದಿಸಿ ತಪ್ಪದೆ ಆದ್ಯತೆಗಳನ್ನು ನೀಡುವುದು.
- ಅರ್ಜಿಯಲ್ಲಿ ನೀಡಲಾದ ಹುದ್ದೆಗಳ ಆದ್ಯತೆಯನ್ನು ಮಾರ್ಪಡಿಸಲು ಅವಕಾಶ ಇರುವುದಿಲ್ಲ.
- ಅರ್ಜಿ ಸಲ್ಲಿಸಿರುವ ಎಲ್ಲಾ ಹುದ್ದೆಗಳಿಗೆ ಒಂದೇ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಗಳಿಸಿದ ಅಂಕಗಳನ್ನೇ ಎಲ್ಲಾ ಹುದ್ದೆಗಳ ಆಯ್ಕೆಗೆ ಪರಿಗಣಿಸಲಾಗುವುದು. ಯಾವುದೇ ಸಂದರ್ಶನದ ಅಂಕಗಳನ್ನು ನೀಡಲಾಗುವುದಿಲ್ಲ.
- ಭಾರತೀಯರಲ್ಲದ ಅಭ್ಯರ್ಥಿ / ಕಾನೂನು ಬಾಹಿರವಾಗಿ ಒಂದಕ್ಕಿಂತ ಹೆಚ್ಚು ಜೀವಂತ ಪತಿ/ಪತ್ನಿ ಹೊಂದಿರುವ ಅಭ್ಯರ್ಥಿ ಹಾಗೂ ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವ ಈ ಸಂಸ್ಥೆಯಲ್ಲಿ ಅಥವ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂದಪಟ್ಟ ಅಥವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ /

ನೀತಿಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣಕ್ಕಾಗಿ ಅಥವ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ / ತರಬೇತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ವಜಾ ಮಾಡಿದ್ದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

- ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವ ನಕಲಿ ಪ್ರಮಾಣಪತ್ರ/ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು, ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ವಜಾ ಮಾಡಲಾಗುವುದು ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.
- ಅಭ್ಯರ್ಥಿಯು ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು, ಎಲ್ಲಾ ಪತ್ರವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.
- ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಪರೀಕ್ಷೆಗೆ ಹಾಜರಾಗಿ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಫಲಿತಾಂಶ ಪ್ರಕಟವಾಗದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತಿಲ್ಲ.
- ಅರ್ಹ ಅಭ್ಯರ್ಥಿಗಳು ಆನ್ ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡುವ ಮೊದಲು ವೆಬ್ ಸೈಟ್‌ನಲ್ಲಿ ನೀಡಿರುವ ವಿವರವಾದ ಜಾಹೀರಾತು/ಸೂಚನೆಗಳನ್ನು/ವಿಧಾನವನ್ನು ತಿಳಿದುಕೊಳ್ಳುವುದು.
- ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಕ ರಾ ರ ಸಾ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಆಯ್ಕೆಗೊಂಡು ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪಧನ ಪಡೆಯಲು ಅರ್ಹರಿರುತ್ತಾರೆ. ಮುಕ್ತ ವೇತನ ಶ್ರೇಣಿಗೆ ಅರ್ಹರಿರುವುದಿಲ್ಲ.
- ಎಸ್ ಎಸ್ ಎಲ್ ಸಿ ಅಥವ ತತ್ಸಮಾನ ಅಥವ ಮೇಲ್ದರ್ಜೆ ವಿದ್ಯಾರ್ಹತೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲಾಗುವ ಕನ್ನಡ ಭಾಷಾ ಜ್ಞಾನ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
- ಆಯ್ಕೆ ಹೊಂದಿದ ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವ ಕರ್ನಾಟಕ ಸರ್ಕಾರ ಅಥವ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಆಕ್ಷೇಪಣೆ ಇಲ್ಲವೆಂಬ ಪತ್ರವನ್ನು ಹುದ್ದೆಗೆ ವರದಿ ಮಾಡಿಕೊಳ್ಳುವಾಗ ಹಾಜರುಪಡಿಸತಕ್ಕದ್ದು.
- ಆಯ್ಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೆ ಅವರನ್ನು ಆಯ್ಕೆಗೆ ಅನರ್ಹಗೊಳಿಸಲಾಗುವುದು.
- ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳಿಂದ ಯಾವುದೇ ರೀತಿಯ ಪತ್ರ ವ್ಯವಹಾರ ಅಥವ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ. ನೇಮಕಾತಿಯ ವಿವಿಧ ಹಂತಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್ ಸೈಟ್ www.ksrtcjobs.com ನಲ್ಲಿ ನೀಡಲಾಗಿರುತ್ತದೆ.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯಲ್ಲಿ ನೀಡಲಾದ ವಿವರಗಳನ್ನು ಆದರಿಸಿ ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ನಂತರ ತಿಳಿಸಲಾಗುವ ದಿನಾಂಕಗಳಲ್ಲಿ ಪ್ರವೇಶ ಪತ್ರದ ದ್ವಿಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ತಿಳಿಸಲಾಗುವ ನಿರ್ದೇಶನಗಳನ್ನು ಪಾಲಿಸುವುದು.
- ಅಭ್ಯರ್ಥಿಯು, ಪರೀಕ್ಷೆಯನ್ನು ಕನ್ನಡ ಅಥವ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದ್ದು, ಪರೀಕ್ಷೆ ಬರೆಯುವ ಭಾಷಾ ಮಾಧ್ಯಮ ಹಾಗೂ ಪರೀಕ್ಷಾ ಕೇಂದ್ರವನ್ನು ಒಮ್ಮೆ ನಮೂದಿಸಿದ ನಂತರ ಅದೇ ಅಂತಿಮವಾಗಿದ್ದು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು

ಅವಕಾಶ ಇರುವುದಿಲ್ಲ. ಆದುದರಿಂದ ಪರೀಕ್ಷೆ ಬರೆಯುವ ಭಾಷಾ ಮಾದ್ಯಮ ಮತ್ತು ಪರೀಕ್ಷಾ ಕೇಂದ್ರವನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ತಿಳಿಸುವುದು. ಅಭ್ಯರ್ಥಿಯು ಅರ್ಜಿಯಲ್ಲಿ ಕೋರಿರುವ ಭಾಷೆಯಲ್ಲಿ ಮಾತ್ರ ಪ್ರಶ್ನೆ ಪತ್ರಿಕೆಯನ್ನು ನೀಡಲಾಗುವುದು. ಎರಡೂ ಭಾಷಾ ಮಾದ್ಯಮಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕೋರಿದಲ್ಲಿ ನೀಡಲಾಗುವುದಿಲ್ಲ.

- ಅಂಗವಿಕಲ ಅಭ್ಯರ್ಥಿಗಳು ಸಂಸ್ಥೆಯ 1982ರ ಪದವೃಂದ ಹಾಗೂ ನೇಮಕ ನಿಯಮಾವಳಿಗಳನ್ವಯ ಸಿಬ್ಬಂದಿ ಮೇಲ್ವಿಚಾರಕ, ಲೆಕ್ಕಪತ್ರ ಮೇಲ್ವಿಚಾರಕ, ಅಂಕಿ ಅಂಶ ಮೇಲ್ವಿಚಾರಕ ಹಾಗೂ ಗಣಕ ಮೇಲ್ವಿಚಾರಕ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
- ಅಭ್ಯರ್ಥಿಗಳು ನಿಗಮದ ವೆಬ್ ಸೈಟ್ www.ksrtcjobs.com ನಲ್ಲಿ ಆಗಿಂದಾಗ್ಗೆ ನೀಡುವ ಸೂಚನೆಗಳನ್ನು ಗಮನಿಸತಕ್ಕದ್ದು.

**ಹೆಚ್ಚಿನ ವಿವರಗಳಿಗಾಗಿ ನಿಗಮದ ಕಾಲ್‌ಸೆಂಟರ್ ಸಂ. 080-49596666 ವೆಬ್ ಸೈಟ್ ಅನ್ನು ವೀಕ್ಷಿಸುವುದು.**

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 25.02.2016.**

**ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 27.02.2016.**

**- ಸಹಿ -**

**ವ್ಯವಸ್ಥಾಪಕ ನಿರ್ದೇಶಕರು**

ಪ್ರತಿಯನ್ನು:

1. ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ (ಎನ್‌ಫೋರ್ಸ್‌ಮೆಂಟ್ ಸೆಲ್), 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
2. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ವೃತ್ತ, ಬೆಂಗಳೂರು ರವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4. ನಿರ್ದೇಶಕರು(ಸಿಬ್ಬಂದಿ:ಪರಿಸರ) / ನಿರ್ದೇಶಕರು(ಭದ್ರತಾ&ಜಾಗೃತಿ) / ನಿರ್ದೇಶಕರು(ತಾಂತ್ರಿಕ) /ನಿರ್ದೇಶಕರು(ಹಣಕಾಸು)/ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕರಾರಸಾನಿಗಮ, ಕೇಂದ್ರಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
5. ವ್ಯವಸ್ಥಾಪಕ ನಿರ್ದೇಶಕರು ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಆಪ್ತ ಕಾರ್ಯದರ್ಶಿಗಳು ರವರ ಮಾಹಿತಿಗಾಗಿ.
6. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ.
8. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿಗಮ/ಬೆಂಮಸಾನಿಗಮ/ವಾಕರಸಾನಿಗಮ/ ಈಕರಸಾನಿಗಮ ರವರ ಮಾಹಿತಿಗಾಗಿ.
9. ಎಲ್ಲಾ ವಿಭಾಗ ಮುಖ್ಯಸ್ಥರು ಹಾಗೂ ಕಾರ್ಯ ವ್ಯವಸ್ಥಾಪಕರವರು, ಕರಾರಸಾನಿಗಮ/ ಬೆಂಮಸಾನಿಗಮ/ವಾಕರಸಾನಿಗಮ/ಈಕರಸಾನಿಗಮ ರವರ ಮಾಹಿತಿಗಾಗಿ ಹಾಗೂ ಈ ಜಾಹೀರಾತನ್ನು ನೌಕರರ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗೀಯ ಕಛೇರಿ/ಪ್ರಾದೇಶಿಕ ಕಾರ್ಯಾಗಾರ/ಘಟಕಗಳಲ್ಲಿರುವ ಸೂಚನಾ ಫಲಕಗಳಲ್ಲಿ (ನೋಟೀಸ್ ಬೋರ್ಡ್) ಪ್ರಕಟಿಸಲು ಸೂಚಿಸಲಾಗಿದೆ.

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು(ನೇಮಕ)**